ದಿನಾಂಕ 17-01-2025 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಪಾಟೀ ಸವಾಲು :** ವಾದಿಯ ಪರವಾಗಿ ಶ್ರೀ ಪಿ ಬಿ ಎ ವಕೀಲರಿಂದ.

ಸಾಕ್ಷಿಗೆ ದಿನಾಂಕ 05-03-2024 ರ ಎರಡ ಕೌಟುಂಬಿಕ ವಾಂಟಣಿ ಕರಾರು ಪತ್ರಗಳನ್ನು ತೋರಿಸಿ ಸದರಿ ದಾಖಲೆಗಳ ಪ್ರಕಾರ ವಾದಿಯರು, 1, 2, 4 ಮತ್ತು 5 ನೇ ಪ್ರತಿವಾದಿ ಹಾಗೂ ನಾನು ಸೇರಿ ದಾವಾ ಆಸ್ತಿಗಳ ಕುರಿತು ಅಪಸಾತಿನಲ್ಲಿ ರಾಜಿ ಮಾಡಿಕೊಂಡಿದ್ದೇವೆ ಹಾಗೂ ಸದರಿ ದಾಖಲೆಗಳಲ್ಲಿ ಬರೆದ ವಿಷಯಗಳು ನಿಜ ಇರುತ್ತವೆ ಎಂದು ಸೂಚಿಸಲಾಗಿ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ದಾಖಲೆಗಳ ಪ್ರಕಾರ ದಾವಾ ಆಸ್ತಿ ಸಂಖ್ಯೆ 1 ಸಿ ರ ಆಸ್ತಿ ನನ್ನ ಪಾಲಿಗೆ ಬಂದಿದ್ದು ಹಾಗೂ ಅದು ಈಗ ನನ್ನ ಹೆಸರಿಗೆ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ವಾಂಟಣಿ ಪತ್ರಗಳ ಪ್ರಕಾರ ದಾವಾ ಆಸ್ತಿ 1 ಎ, 1 ಎ(1), 1 ಎ(2) ಹಾಗೂ 1 ಬಿ ಆಸ್ತಿಗಳು ವಾದಿಯರ ಪಾಲಿಗೆ ಹೋಗಿದ್ದು, ಅವುಗಳ ಪಹಣಿ ಪತ್ರಿಕೆಗಳು ವಾದಿಯ ಹೆಸರಲ್ಲಿ ದಾಖಲಾಗಿರುತ್ತವೆ ಎಂದರೆ ಸರಿ. ಮೇಲೆ ಹೇಳಿದ ವಾಂಟಣಿ ಕಾರಾರು ಪತ್ರಗಳ ಪ್ರಕಾರ ದಾವಾ ಆಸ್ತಿಯ ಕಂದಾಯ ದಾಖಲೆಗಳಿಗೆ ನಮ್ಮ ನಮ್ಮ ಹೆಸರುಗಳು ಎಮ್ ಆರ್ ನಂಬರ ಎಚ್8/2023-24 ರ ಪ್ರಕಾರ ದಾಖಲಾಗಿರುತ್ತವೆ ಎಂದರೆ ಸರಿ. ಮೇಲೆ ಹೇಳಿದ ಆಸ್ತಿಗಳು ಕುರಿತು ನಮ್ಮ ಮತ್ತು ವಾದಿಯರ ನಡುವೆ ಯಾವುದೇ ತಕರಾರು ಇರುವುದಿಲ್ಲ ಎಂದರೆ ಸರಿ.

ಚಬ್ಬಲಗೇರಿ ಗ್ರಾಮದ ಆಸ್ತಿ ಸಂಖ್ಯೆ 40 ಮತ್ತು 24 ಬಿ ರ ಮನೆಯ ಆಸ್ತಿಗಳು ಕ್ರಮವಾಗಿ ನನ್ನ ಮತ್ತು ನನ್ನ ಹೆಂಡತಿಯ ಹೆಸರಲ್ಲಿ ಇರುತ್ತವೆ ಎಂದರೆ ಸರಿ. ಅದೇ ರೀತಿ ನಿಡಿ 10 ರಿಂದ 12 ರ ಆಸ್ತಿಗಳು 1 ನೇ ವಾದಿಯ ಹೆಸರಲ್ಲಿ ಇರುತ್ತವೆ ಎಂದರೆ ಸರಿ. ಸದರಿ ಮನೆ ಆಸ್ತಿಗಳ ಕುರಿತು ಸಹ ನಮ್ಮ ಮತ್ತು ವಾದಿಯರ ನಡುವೆ ತಕರಾರು ಇರುವುದಿಲ್ಲ ಹಾಗೂ ಅವು ಯಾರ ಹೆಸರಿಗೆ ಇವೆಯೋ ಅದಕ್ಕೆ ನಮ್ಮ ನಡುವೆ ಯಾವುದೇ ತಕರಾರು ಇಲ್ಲ ಎಂದರೆ ಸರಿ. ಹಳಿಯಾಳ ಪಟ್ಟಣದಲ್ಲಿರುವ ಆಸ್ತಿಗಳು ಎಂದರೆ ನಿಡಿ 1 ಮತ್ತು 2 ರಆಸ್ತಿಗಳ ಕುರಿತು ಸಹ ರಾಜಿ ಆಗಿರುತ್ತದೆ ಎಂದರೆ ಸಾಕ್ಷಿ ಯಾವುದೇ ಸರಿಯಾದ ಉತ್ತರ ನೀಡಲಿಲ್ಲ. ನಿಡಿ 1 ಮತ್ತು 2 ರ ಆಸ್ತಿಗಳನ್ನು ಮೇಲೆ ಹೇಳಿದ ವಾಂಟಣಿ ಕರಾರು ಪತ್ರಗಳಲ್ಲಿ ಸೇರಿಸಿಲ್ಲ ಎಂದರೆ ಸರಿ.

O.S.10/2019  Cross of DW 1

ಮುಂದುವರೆದ  ಪಾಟೀ ಸವಾಲಿಗೆ ಸಮಯ ಕೋರಿದ್ದು   ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.